ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹುಣಸೂರು

**ಓ.ಎಸ್. ನಂ. 266/2022**
ಪಿ.ಡಬ್ಲೂ -**2**

ದಿಃ **20.07.2023** ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರು | ರಾಜಕುಮಾರ |
| ಗಂಡ/ತಂದೆಯ ಹೆಸರು | ಸೀತಾರಾಮ |
| ವಯಸ್ಸು | ಸುಮಾರು **53** ವರ್ಷ |
| ಕೆಲಸ | ಬ್ಯಾಂಕ್ ನಿರ್ವಾಹಕ, ಎಸ್.ಬಿ.ಐ |
| ವಾಸಸ್ಥಳ | ಮೈಸೂರು. |

**ಮುಖ್ಯ ವಿಚಾರಣೆ ವಾದಿ ಪರ ಶ್ರೀ ಕೆ.ವಿ.ವಿ. ವಕೀಲರಿಂದ**

ನಿಪಿ-2 ನ್ನು ನಮ್ಮ ಬ್ಯಾಂಕ್ ವತಿಯಿಂದ ನೀಡಲಾಗಿರುತ್ತದೆ. ಪ್ರತಿವಾದಿಯ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲದಿರುವ ಬಗ್ಗೆ ನಿಪಿ-2 ರಂತೆ ಮೆಮೋವನ್ನು ನೀಡಲಾಗಿದೆ.

**ಪಾಟೀಸವಾಲುಃ ಪ್ರತಿವಾದಿ ಪರ ಶ್ರೀ ವಿ.ಕೆ. ವಕೀರರಿಂದ**

ನಿಪಿ-1 ರಂತೆ ಚೆಕ್ ನಿಮ್ಮ ಬ್ಯಾಂಕಿಗೆ ನಗದೀಕರಣಕ್ಕಾಗಿ ಯಾವ ದಿನಾಂಕದಂದು ನೀಡಲಾಗಿತ್ತು ಎಂದರೆ ಸಾಕ್ಷಿ ನನಗೆ ಈಗ ಹೇಳಲಾಗುವುದಿಲ್ಲ ಎಂದು ಹೇಳುತ್ತಾರೆ. ನಿಪಿ-1 ರಂತೆ ಚೆಕ್ ನ್ನು ದಿಃ20.12.2019 ರಂದು ಸಾಕಷ್ಟು ಹಣ ಇಲ್ಲ ಎಂದು ವಾಪಸ್ಸು ನೀಡಲಾಗಿರುತ್ತದೆ. ನಿಪಿ-1 ರಂತೆ ಚೆಕ್ ನ್ನು ವಾದಿಗೆ ನೀಡಲಾಗಿರುತ್ತದೆ. ನೀವು ಚೆಕ್ ನ್ನು ವಾಪಸ್ಸು ನೀಡಬೇಕಾದರೆ ಡೆಲಿವರಿ ಪುಸ್ತಕದಲ್ಲಿ ಸಹಿ ಪಡೆದು ನೀಡಿದ್ದೀರಾ ಎಂದರೆ ಸಾಕ್ಷಿ ಬೇರೆ ಬ್ಯಾಂಕಿನ ಚೆಕ್ ಆದರೆ ಸಹಿ ಪಡೆಯುವುದಿಲ್ಲ ಎಂದು ಹೇಳುತ್ತಾರೆ.

ಮರುವಿಚಾರಣೆ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.
ಓ ಹೇ ಕೇ ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,
ಹುಣಸೂರು